ದಿನಾಂಕಃ 07-08-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್.ಎಂ.ಎಸ್ ವಕೀಲರಿಂದ:-

3. ನಮ್ಮ ಮತ್ತು ಆರೋಪಿತರ ನಡುವೆ ಜಾಗದ ಬಗ್ಗೆ ವಿವಾದ ಇತ್ತು ಎಂದರೆ ಸರಿ. ಆ ಸಂಬಂಧ ನಾನು ಮತ್ತು ನನ್ನ ಹೆಂಡತಿ ಠಾಣೆಗೆ ಹೋಗಿದ್ದೆವು ಎಂದರೆ ಸರಿ. ನಮ್ಮ ಜಾಗದ ವಿವಾದವನ್ನು ಬಗೆಹರಿಸುವ ಸಲುವಾಗಿ ಆರೋಪಿತರ ವಿರುದ್ಧ ನಮ್ಮ ಹಿತೈಷಿಗಳ ಒತ್ತಾಯದ ಮೇರೆಗೆ ಮತ್ತು ಅವರ ಹೇಳಿಕೆ ಮೇರೆಗೆ ನನ್ನ ಹೆಂಡತಿ ದೂರನ್ನು ನೀಡಿದ್ದಳು ಎಂದರೆ ಸರಿ.

4. ನನ್ನ ಹೆಂಡತಿ ಕೆಲಸ ಮಾಡುವಾಗ ಬಿದ್ದು ಗಾಯ ಮಾಡಿಕೊಂಡಿದ್ದಳು ಎಂದರೆ ಸರಿ. ದೂರಿನಲ್ಲಿ ಹೇಳಿದಂತೆ ಆರೋಪಿತರಿಗೂ ನಮಗೂ ಯಾವುದೇ ರೀತಿಯ ಜಗಳವಾಗಿರುವುದಿಲ್ಲ ಮತ್ತು ಆರೋಪಿತರು ನನ್ನ ಹೆಂಡತಿಯ ಮೇಲೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ ಮತ್ತು ನಮಗೆ ಯಾವುದೇ ರೀತಿಯಲ್ಲಿ ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನನ್ನು ಆರೋಪಿತರು ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ಹಲ್ಲೆ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ.

5. ಮು.ಮಾ.1 ರಿಂದ 3 ನಮ್ಮ ಮನೆಯಲ್ಲಿ ಇರುವ ವಸ್ತುಗಳು ಎಂದರೆ ಸರಿ. ನಾನು ಪೊಲೀಸರ ಮುಂದೆ ಯಾವುದೇ ರೀತಿಯಲ್ಲಿ ಹೇಳಿಕೆ ನೀಡಿರುವುದಿಲ್ಲ. ನಮ್ಮ ಜಾಗದ ವಿವಾದ ನಮ್ಮ ಪರವಾಗಿ

ಆಗಲಿ ಎಂದು ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೆ ಎಂದರೆ ಸರಿ.

<u>ಮರು ವಿಚಾರಣೆಃ ಮಾನ್ಯ ಪಿ.ಪಿ. ರವರಿಂದಃ</u>

6. ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವಾಗ ಮಾನಸಿಕ ಸ್ಥಿತಿ ಸರಿಯಾಗಿತ್ತು ಎಂದರೆ ಸರಿ. ನಾನು ಯಾರ ಒತ್ತಾಯಕ್ಕೂ ಸಾಕ್ಷ್ಯ ಹೇಳಿರಲಿಲ್ಲ ಎಂದರೆ ಸರಿ. ನಾವು ಮತ್ತು ಆರೋಪಿತರು ನ್ಯಾಯಾಲಯದ ಹೊರಗಡೆ ರಾಜಿ ಮಾಡಿಕೊಂಡಿದ್ದರಿಂದ ನಡೆದ ವಿಚಾರ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದರೂ ಆರೋಪಿತರ ಕೋರಿಕೆಯ ಮೇರೆಗೆ ಅವರಿಗೆ ಸಹಾಯವಾಗಲೆಂದು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು 4 ಗುಂಟೆ ಜಾಗವನ್ನು ನಮ್ಮ ಬಿಟ್ಟು ಕೊಟ್ಟಿದ್ದರಿಂದ ನಾವು ರಾಜಿ ಮಾಡಿಕೊಂಡಿರುತ್ತೇವೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಕಿರಣ್ ಕಿಣಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ